ಅಧ್ಯಕ್ಷರು.—ಅವರ ಇಷ್ಟಬಂದ ಹಾಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ಆ ರೀತಿ ಮಾತ ನಾಡುವುದಕ್ಕಾಗುವುದಿಲ್ಲ. ಅವರಿಗೆ ಎಷ್ಟು ಕಾಲ ಕೊಟ್ಟಿದ್ದರೂ ಕೂಡ ಅವರು ತಮ್ಮ ಭಾಷಣವನ್ನು ನಿಲ್ಲಿಸದೇ ಹೋದರೆ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ.— ಶ್ರೀಮಾನ್ ಪಾಟಾಳ್ ನಾಗರಾಜ್‌ರವರು ಮಾತನಾಡಿದ್ದನ್ನು ನಾನು ಸರಿ ಎಂದು ಸಮರ್ಥನೆ ಮಾಡುವುದಿಲ್ಲ. ಆದರೆ ಅವರನ್ನು ಬಾಡಿಲಿ ರಿವೂವ್ ಮಾಡುವ ಅವಶ್ಯಕತೆ ಇರಲಿಲ್ಲ.

ಶ್ರೀ ಡಿ. ಕೆ. ನಾಯಕರ್.—ಇಲ್ಲಿ ಇರತಕ್ಕ ಎಲ್ಲರೂ ಕೂಡ ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾತನಾಡ ಬೇಕು. ಈ ಸದನದ ಹಕ್ಕುಗಳನ್ನು ಎಲ್ಲರೂ ಗೌರವಿಸಬೇಕು. ಅಧ್ಯಕ್ಷರಿಗೆ ಕಿಮ್ಮತ್ತು ಕೊಡದೇ ಹೋದರೆ ಏನು ಮಾಡಬೇಕು ? ಅಧ್ಯಕ್ಷರಿಗೆ ಕಿಮ್ಮತ್ತು ಕೊಡುವ ವಿಷಯದಲ್ಲಿ ನಾವಾಗಲಿ, ತಾವಾಗಲಿ ತಿಳಿದುಕೊಳ್ಳಬೇಡವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೇ, ನನ್ನ ವಿನಂತಿ ಇಷ್ಟೆ. ಈ ಒಂದು ವಿಷಯದಲ್ಲಿ ಚಿತ್ರೀಕರಣ ಇಟ್ಟಿದ್ದಾರೆ. ಶ್ರೀಮಾನ್ ಆರ್ಮುಗಂರವರು ಕೊಟ್ಟಿರುವ ವರದಿ ಬಗ್ಗೆ ವಿವರವಾಗಿ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬರುವುದಕ್ಕೆ ಈ ಸನ್ನಿವೇಶದಲ್ಲಿ ಎಲ್ಲರಿಗೂ ಅವಕಾಶ ಇದೆ. ನೀವಾಗಲೀ, ಅವರಾಗಲಿ ಈ ಬಗ್ಗೆ ಏನು ಸಲಹೆಗಳು ಹೇಳಬೇಕೋ ಹೇಳಲಿ, ಆದರಲ್ಲಿ ಏನು ದೋಷ ಇದೆ ಆ ದೋಷ ಗಳನ್ನು ತಿದ್ದಿಕೊಂಡು ಎಷ್ಟು ದೂರ ಹೋಗಿ ಮಾಡುವುದಕ್ಕೆ ಸಾಧ್ಯವೋ ಅಷ್ಟು ದೂರ ಹೋಗಿ ಆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕೆಂಬ ಮನಸ್ಸು ಮನಃ ಪೂರ್ವಕವಾಗಿ ನಮಗೆ ಇದೆ. ಇಂಥಹ ಸನ್ನಿ ವೇಶದಲ್ಲಿ ಈ ರೀತಿ ಬಂದದ್ದು ದುರಾದೃಷ್ಟಕರ ಎಂದು ನಾನು ಭಾವಿಸುತ್ತೇನೆ. ಅಧ್ಯಕ್ಷರು ಎಷ್ಟೆ ಕಾಲಾವಕಾಶ ಕೊಟ್ಟರೂ ಕೂಡ ಎಷ್ಟು ಹೇಳಿದರೂ ಕೂಡ ಶ್ರೀಮಾನ್ ಪಾಟಾಳ್ ನಾಗರಾಜ್‌ರವರು ಆದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡಿದ್ದರಿಂದ ಈ ಕಾರ್ಯಕ್ರಮ ಅನಿವಾರ್ಯವಾಯಿತು ಎಂದು ನಾನು ಭಾವಿಸಬೇಕಾಗುತ್ತದೆ. ಈ ಮಾನ್ಯ ಸಭೆಯ ಸದಸ್ಯರು ವಿಶೇಷವಾಗಿ ಈ ವಿಷಯವನ್ನೇ ಪ್ರಸ್ತಾಪ ಮಾಡಿ ಸರ್ಕಾರದ ಮನಸ್ಸಿಗೆ ಹಿಡಿಯುವ ರೀತಿಯಲ್ಲಿ ಹೇಳುತ್ತಾ ಇರುವಾಗ ಅವರು ಈ ಬಗ್ಗೆ ಒತ್ತಾಯ ಮಾಡಿ ಹೇಳಬೇಕಾದ್ದು ಅಗತ್ಯ ಇರಲಿಲ್ಲ ಎಂದು ನಾನು ಭಾವಿಸುತ್ತೇನೆ. ತಾವು ಹೇಳಿರತಕ್ಕಂಥ ಸಲಹೆಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಅಲ್ಲಿ ಇರತಕ್ಕಂಥ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ, ಸರ್ವ ಪ್ರಯತ್ನ ವನ್ನೂ ಮಾಡಲು ಸಿದ್ಧರಾಗಿದ್ದೇವೆ. ಈ ಬಗ್ಗೆ ತಮ್ಮ ಸಲಹೆಗಳನ್ನೂ ಕೊಡಬೇಕು ಎಂದು ನಾನು ಅತಿ ವಿನಯದಿಂದ ಎದುರು ಪಕ್ಷದ ಸದಸ್ಯರಿಗೂ ಅಧ್ಯಕ್ಷರ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—(ಮಾತನಾಡುವುದಕ್ಕೆ ಎದ್ದು ನಿಂತರು)

ಅಧ್ಯಕ್ಷರು.—ನಿಮ್ಮ ಗಳಿಗೆಲ್ಲಾ ಗೊತ್ತಿರುವ ಹಾಗೆ ಸುಮಾರು ೨೦ ನಿಮಿಷ ಅವಕಾಶ ಕೊಟ್ಟೆ ನಿಮ್ಮನ್ನೂ ರಿಕ್ವೆಸ್ಟ್ ಮಾಡಿಕೊಂಡೆ. ಯಾರಾವರೂ ಹೋಗಿ ಅವರನ್ನು ಕೂತುಕೊಳ್ಳಿ ಎಂದು ಹೇಳಲಿಲ್ಲಾ ಈ ಸದನದಲ್ಲಿ ಈ ರೀತಿ ಅಗೌರವ ನಡೆಯುತ್ತಾ ಇರುವಾಗ ಶ್ರೀಮಾನ್ ದೇವೇಗೌಡರೂ ಕೂಡ ಅವರಿಗೆ ಕೈ ಸನ್ನೆ ಮಾಡಿ ತೋರಿಸಿದರೇ ಹೊರತು ಅವರ ಹತ್ತಿರ ಹೋಗಿ ಏನೂ ಆಡ್ವೈಸ್ ಮಾಡಲಿಲ್ಲಾ ಪೋಷನ್ ಮೂವ್ ಮಾಡಿದ ಮೇಲೂ ೫ ನಿಮಿಷ ವೈಟ್ ಮಾಡಿದರೂ ಅವರು ಕೂತುಕೊಳ್ಳಲಿಲ್ಲ. It is not a happy thing for me. ಎಲ್ಲಾ ಸದಸ್ಯರೂ ಕೂಡ ಸಂತೋಷವಾಗಿರಬೇಕು. ಆನಂದವಾಗಿರಬೇಕು ಎಂಬುದೇ ನನ್ನ ಆಸೆ. ಎಲ್ಲರೂ ರೂಲ್ಸ್ ಪ್ರಕಾರ ನಡೆದುಕೊಂಡು ಹೋಗಬೇಕೇ ಹೊರತು ಈ ರೀತಿ ಮಾಡಿದರೆ ಯಾರ ಮನಸ್ಸಿಗೆ ಆಗಲಿ, ನನ್ನ ಮನಸ್ಸಿಗೇ ಆಗಲಿ ಆನಂದವಾಗುತ್ತದೆಯೇ ? ಈ ರೀತಿ ಹೇಳುವುದನ್ನು ಅನ್ಯಥಾಭಾವಿಸಿಕೊಳ್ಳಬೇಡಿ. As a lost resort I had to do that. ಈಗ ಮುಂದಿನ ಕೆಲಸಕ್ಕೆ ಹೋಗುವುದಕ್ಕೆ ಅನುವು ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

(Absence of doctor at Bagepalli Dispensary and Interviews by the P.S.C.

ಶ್ರೀ ಸಿ. ಬೈರೇಗೌಡ (ಮೇಮಗಲ್).— ಅಧ್ಯಕ್ಷರೇ ರೂಲ್ಸ್ ಪ್ರಕಾರ ನಾನು ಒಂದು ಕಾಲ್ ಅಟೆನ್ಷನ್ ನೋಟೀಸ್ ಕೊಟ್ಟಿದ್ದೆ. ಅದು ಏನೆಂದರೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ತಿಂಗಳಾನುಗಟ್ಟಲೆ ಡಾಕ್ಟರ್ ಇಲ್ಲ ಎಂದು. ಆ ಬಗ್ಗೆ ಏನಾಯಿತು ?

ಎರಡನೆಯದಾಗಿ ರೂಲ್ ೩೧೨ರ ಪ್ರಕಾರ ಈ ಪೊತ್ತಿನ ದಿವಸ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕೆಲವು ಪೋಸ್ಟ್‌ಗಳಿಗೆ ಇಂಟರ್‌ವ್ಯೂ ನಡೆಸುತ್ತಿದ್ದಾರೆ. ಇದರ ಬಗ್ಗೆ ಬರವಣಿಗೆಯಲ್ಲಿ ಬರೆದು ಕಳುಹಿಸಿದ್ದೇನೆ. ಈ ರೀತಿ ಇಂಟರ್‌ವ್ಯೂ ನಡೆದರೆ ರಾಜ್ಯದ ಒಂದು ಭಾಗದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ನಾವು ಈ ಬಗ್ಗೆ ಹೇಳುವುದು ಒಂದು ಆಗುತ್ತದೆಯೇ ವಿನಹ, ಅವಕ್ಕೆ ಯಾವ ಜವಾಬೂ ಬರುವ ಹಾಗಿಲ್ಲ.

ಅಧ್ಯಕ್ಷರು.—ಅದು ಮುಖ್ಯ ಮಂತ್ರಿಗಳ ಆಫೀಸಿಗೆ ಹೋಗಿದೆ. ಅದು ಬರುವವರೆಗೆ ವೈಟ್ ಮಾಡಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲದೇ ಹೋದರೂ ಅವರ ಪರವಾಗಿ ಯಾರಾದರೂ ಮಂತ್ರಿಗಳು ಈ ಬಗ್ಗೆ ಒಂದು ಅಷ್ಯೂರೆನ್ಸ್ ಕೊಡಲಿ. ಸಾಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುಖ್ಯ ಮಂತ್ರಿಗಳ ಆಫೀಸಿಗೆ ಅದು ಹೋಗಿದ್ದರೆ ಆ ಫೈಲನ್ನು ತರಿಸಿ, ಅದನ್ನು ನೋಡಿ ಏನು ಇದೆ ಎಂದು ನಾಳೆ ಹೇಳುತ್ತೇನೆ.

Expenses under famine Relief work.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ರೂಲ್ ೩೧೨ರ ಪ್ರಕಾರ ಈ ಸಭೆಯು ಗಮನಕ್ಕೆ ಮು ವಿಷಯವನ್ನು ತರಲಿಚ್ಚಿಸುತ್ತೇನೆ. ಕಾಮಗಾರಿ ಕೆಲಸಕ್ಕಾಗಿ ಎಲ್ಲಾ ಜಿಲ್ಲೆಗಳಿಗೂ ಸರ್ಕಾರದವರು ಡಪ್ಯೂಟಿ ಕಮೀಷನರಿಗೆ ಒಂದು ಆದೇಶ ಕೊಟ್ಟರು. ಅದು ಏನೆಂದರೆ ೬೪ರ ಫ್ಯಾಮಿನ್ ಪ್ರಕಾರ ಹಿಂದೆ ಈ ಕೆಲಸಕ್ಕೆ ಏನೂ ಖರ್ಚು ಮಾಡುತ್ತಿದ್ದೀರೋ ಈಗ ಅದರ ಡಬ್ಬಲ್ ಖರ್ಚು ಮಾಡಬೇಕು ಎಂದು. ಅವರು ಆ ತರಹ ಕೆಲಸ ಮಾಡುತ್ತಾ ಇಲ್ಲ. ಮತ್ತೆ ಡಿವಿಷನಲ್ ಕಮೀಷನರಿಂದ ಡೆಪ್ಯೂಟಿ ಕಮೀಷನರ ಪರಿಗೆ ಬೇರೆ ಒಂದು ಆದೇಶ ಬಂದಿದೆ. ಏನೆಂದರೆ ಮೊದಲು ಯಾವ ರೀತಿ ಖರ್ಚು ಮಾಡುತ್ತಿದ್ದಿರಿ ಅದೇ ರೀತಿ ಖರ್ಚು ಮಾಡಬೇಕು ಬಾಕಿಯದನ್ನು ಪಾಪಸ್ಸು ಕಳುಹಿಸಬೇಕು ಎಂದು. ಸರ್ಕಾರದವರು ಈ ಕೆಲಸಗಳಿಗೆ ಡಬ್ಬಲ್ ಖರ್ಚು ಮಾಡುವುದಕ್ಕೆ ಆದೇಶ ಕೊಟ್ಟಿದ್ದಾರೆ

ಈ ಕನ್‌ಫ್ಯೂಷನ್ ಎಲ್ಲಾ ಜಿಲ್ಲೆಗಳಲ್ಲಿಯೂ ಉಂಟಾಗಿದೆ. ಇದರಿಂದಾಗಿ ನಮ್ಮ ಕಡೆ ಕೆಲಸಗಳು ನಿಂತುಹೋಗಿವೆ ಮತ್ತು ಕೆಲವು ಅರ್ಧಂಬರ್ಧವಾಗಿವೆ. ಇದರ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಈಗ ಒಂದೊಂದು ಜಿಲ್ಲೆಯಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಿದ್ದೇವೋ ಅದರ ಎರಡರಷ್ಟು ಹಣವನ್ನು ಖರ್ಚು ಮಾಡಲಿಕ್ಕೆ ಅನುಮತಿ ಕೊಟ್ಟಿದ್ದೇವೆ ನಿಜ. ಆದೇ ಪ್ರಕಾರ ಎಷ್ಟೆಷ್ಟು ಖರ್ಚಾಗಿದೆ ಇನ್ನು ಯಾವ ಯಾವ ಕೆಲಸಗಳನ್ನು ತೆಗೆದುಕೊಂಡಿದ್ದಾರೆ, ಯಾವುದನ್ನು ಈಗ ನಿಲ್ಲಿಸಬಹುದು ಎಂಬ ಬಗ್ಗೆ ವಿವರಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಈ ಮಧ್ಯೆ ಯಾವುದೂ ಕೆಲಸ ಮಾಡಬೇಡಿ ಎಂದು ನಿಲ್ಲಿಸಲಾಗಿದೆ, ವಿವರಗಳನ್ನೆಲ್ಲಾ ಡೆಪ್ಯೂಟಿ ಕಮಿಷನರ್‌ಗಳಿಂದ ತರಿಸಿಕೊಂಡ ಮೇಲೆ ಮೊದಲು ಏನು ಸರ್ಕಾರ ಆಜ್ಞೆ ಮಾಡಿದೆಯೋ ಅದರಂತೆ ಒದಗಿಸಿಕೊಟ್ಟಿದ್ದ ಹಣದಲ್ಲಿ ಶೇಷ ಖರ್ಚು ಮಾಡುವುದಕ್ಕೆ ಮತ್ತೆ ಆಜ್ಞೆ ಕೊಡುತ್ತೇವೆ. ಲೆಖ್ಖ ತೆಗೆದುಕೊಳ್ಳುವುದಕ್ಕೋಸ್ಕರ ಈ ಮಧ್ಯೆ ನಿಲ್ಲಿಸಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ). ಇದೇ ವಿಷಯದಲ್ಲಿ ನಾನು ಸಹ ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ೧೬–೧೭ ದಿವಸಗಳಾದವು ಇದಲ್ಲದೆ ಇನ್ನು ಕೆಲವು ವಿಷಯಗಳ ಬಗ್ಗೆ ಕಳುಹಿಸಿದ್ದೆ. ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ಆದೇಶ ಹೋಗಿದೆ, ಯಾವುದು ಪೇಮೆಂಟ್ಸ್ ಸಹ ಮಾಡಬೇಡಿ ಎಂದು. ಎಕ್ಸಿಕ್ಯೂಟೀವ್ ಇಂಜಿನಿಯರುಗಳಿಗೆ ಆ ರೀತಿ ಹೇಳಿರುವುದರಿಂದ ಮಾಡಿರುವ ಕೆಲಸ ಅರ್ಧಂಬರ್ಧವಾಗಿದೆ. ಇದರಿಂದ ಹಳೆ ಮೈಸೂರಿನ ಭಾಗದ ೪ ಡಿಸ್ಟ್ರಿಕ್ಟು ಶಿವಾಯಿ ಉಳಿದಂತಹ ೧೦ ಜಿಲ್ಲೆಗಳಿಗೆ ಬಹಳ ಅಪಘಾತವಾಗುತ್ತದೆ, ಎಲ್ಲಾ ದುಡ್ಡನ್ನು ವಿತ್‌ಡ್ರಾ ಮಾಡುವುದಕ್ಕೆ ವ್ಯವಸ್ಥೆ ಆಗಿರುವುದರಿಂದ ಕಾಮಗಾರಿಗಳು ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ತಾವು ಖಚಿತವಾದ ಅಭಿಪ್ರಾಯ ಹೇಳಿದರೆ ವ್ಯಾಯಶಃ ಅರ್ಧಂಬರ್ಧ ಆಗಿರುವ ಕೆಲಸಗಳನ್ನು ಮುಂಗಿಸುವುದಕ್ಕೆ ಸಹಾಯವಾಗುತ್ತದೆ ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಹಾಸನಕ್ಕೆ ೪೧ ಲಕ್ಷ ರೂಪಾಯಿ ಕ್ಷಾಮ ಪರಿಹಾರಕ್ಕೆ ಕೊಟ್ಟಿದ್ದು ದುಡ್ಡನ್ನು ಪಾಪಸ್ ತೆಗೆದುಕೊಂಡಿಲ್ಲ ಎಂದು ಹೇಳಿದಿರಿ. ಆದರೂ ಕೂಡ ಆ ದುಡ್ಡಿನಲ್ಲಿ ಒಂಬತ್ತೂವರೆ ಲಕ್ಷ ರೂಪಾಯಿ ಪಾಪಸ್ ತೆಗೆದುಕೊಂಡಿದ್ದೀರಿ ? ಪಾಪಸ್ ತೆಗೆದುಕೊಳ್ಳುವ ಅವಶ್ಯಕತೆ ಏನಿ ಇತ್ತು ?